ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

**ಸರ್ವ ಶಿಕ್ಷಣ ಅಭಿಯಾನ–ಕರ್ನಾಟಕ**

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–01**

ಸಂ: ಸ.ಶಿ.ಅ/ಒಒಎಸ್‌ಸಿ/ತ್ರೈ–ಸಭೆ/ಅನುಪಾಲನೆ/10–11 ದಿನಾಂಕ: 05.06.10

## ಸುತ್ತೋಲೆ

ವಿಷಯ: ಶಾಲೆಯಿಂದ ಹೊರುಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ಸೇರಿಸುವ ಸಂಬಂಧ ಸರ್ವ ಶಿಕ್ಷಣ ಅಭಿಯಾನ ವತಿಯಿಂದ ಕಾರ್ಯಕ್ರಮಗಳನ್ನು ಅನುಷ್ಠಾಗೊಳಿಸುವ ಬಗ್ಗೆ.

ಉಲ್ಲೇಖ: 1) ದಿನಾಂಕ: 13.02.10 ರಂದು ನವದೆಹಲಿಯಲ್ಲಿ ಮಾಡುವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ವತಿಯಿಂದ ನಡೆದ ತ್ರೈಮಾಸಿಕ ಪರಿಶೀಲನಾ ಸಭೆಯ ನಡವಳಿಗಳು.

2) ದಿನಾಂಕ: 22.01.10 ರಂದು ನಡೆದ ಸರ್ವ ಶಿಕ್ಷಣ ಅಭಿಯಾನ ಸಮಿತಿಯ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ 6ನೇ ಸಭೆಯ ನಡವಳಿಗಳು.

**********

ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಸರ್ವ ಶಿಕ್ಷಣ ಅಭಿಯಾನದ ವತಿಯಿಂದ ನಡೆಸಲಾಗುತ್ತಿರುವ ಶಾಲೆಯಿಂದ ಹೊರಗುಳಿದ ಮಕ್ಕಳ ಕಾರ್ಯತಂತ್ರಗಳ ಅನುಷ್ಠಾನ ಹಾಗೂ ನಡೆಸುವಿಕೆ ಸಂಬಂಧ ಉಲ್ಲೇಖ ಸಭೆಗಳ ನಡವಳಿಗಳಲ್ಲಿ ಮಾರ್ಗದರ್ಶನ ನೀಡಲಾಗಿದ್ದು, ಈ ಬಗ್ಗೆ ಜಿಲ್ಲಾ, ಬ್ಲಾಕ್, ಕ್ಲಸ್ಟರ್ ಹಾಗೂ ಶಾಲಾ ಹಂತದಲ್ಲಿ ಸಂಬಂಧಿಸಿದ ಅಧಿಕಾರಿಗಳು ಆದ್ಯತೆ ಮೇರೆಗೆ ಕಡ್ಡಾಯವಾಗಿ ಸೂಕ್ತ ಕ್ರಮ ಕೈಗೊಳ್ಳುವ ಅಗತ್ಯತೆ ವಿವರಿಸಲಾಗಿರುತ್ತದೆ. ಅದರಂತೆ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರು ತಮ್ಮ ನೇತೃತ್ವದಲ್ಲಿ ಕೂಡಲೇ ಡಿವೈಪಿಸಿ, ಬಿ.ಇ.ಓ. ಹಾಗೂ ಬಿ.ಆರ್.ಸಿ. ರವರ ಸಭೆಯನ್ನು ಕರೆದು ಈ ಕೆಳಗೆ ನೀಡಿರುವ ಮಾರ್ಗದರ್ಶನದಂತೆ ಕ್ರಮ ಕೈಗೊಳ್ಳುವ ಬಗ್ಗೆ ತಿಳಿಸುವುದು. ಅನುಪಾಲನಾ ವರದಿಯನ್ನು ಈ ಕಛೇರಿಗೆ ಕಳುಹಿಸುವುದು.

1. **ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ–2009 ರನ್ವಯ ವಿಶೇಷ ತರಬೇತಿ ಹಮ್ಮಿಕೊಳ್ಳುವ ಬಗ್ಗೆ:**

ಇಲಾಖಾ ಅಧಿಕಾರಿಗಳು, ಶಾಲಾ ಉಸ್ತುವಾರಿ ಸಮಿತಿ ಸದಸ್ಯರು, ಸ್ಥಳೀಯ ಹಾಗೂ ಸಮುದಾಯದ ಜನರು ಯಾವುದೇ 6 ರಿಂದ 14 ವರ್ಷದ ಮಗುವನ್ನು ಶಾಲೆಯಿಂದ ಹೊರಗುಳಿದ ಮಗು ಎಂದು ಗುರುತಿಸಿದ ಕೂಡಲೇ ಯಾವುದೇ ಕಾರಣಕ್ಕೂ ವಿಳಂಬ ಮಾಡದೇ ಹತ್ತಿರವಿರುವ ಶಾಲೆಗೆ ಮಗುವಿನ ವಯಸ್ಸಿನ ಹಾಗೂ ಕಲಿಕಾ ಸಾಮರ್ಥ್ಯಗಳ ಆಧಾರದ ಮೇಲೆ ಅರ್ಹ ತರಗತಿಗೆ ದಾಖಲಿಸಿ ಅಗತ್ಯತೆಗೆ ಅನುಸಾರವಾಗಿ ಕನಿಷ್ಠ 3 ತಿಂಗಳಿಂದ ಪ್ರಾರಂಭಿಸಿ ಗರಿಷ್ಠ 2 ವರ್ಷದ ವರೆಗೆ ವಿಶೇಷ ತರಬೇತಿಯನ್ನು ಏರ್ಪಡಿಸಲು ನಿಯಮಾನುಸಾರ ಸೂಕ್ತ ಕ್ರಮ ಮಾಡಬೇಕು. ತರಬೇತಿ ಮೂಲಕ ಕನಿಷ್ಠ ಕಲಿಕಾ ಸಾಮರ್ಥ್ಯಗಳನ್ನು ಗಳಿಸಿದ ಕೂಡಲೇ ಶಾಲಾ ತರಗತಿಗೆ ಸೇರಿಸಿ ನಿರಂತರವಾಗಿ ತರಗತಿಗಳಿಗೆ ಹಾಜರಾಗಲು ಪ್ರೇರೇಪಿಸುವುದು.

.....2/-

✓ **ವಿಶೇಷ ತರಬೇತಿ ನೀಡುವ ಅವಧಿ ಸಂಬಂಧ:**

a. ಇತ್ತೀಚೆಗಷ್ಟೆ (ಹಿಂದಿನ 5 ತಿಂಗಳ ಅವಧಿಯಲ್ಲಿ) ಶಾಲೆ ಬಿಟ್ಟ ಮಕ್ಕಳಿಗೆ 3 ತಿಂಗಳ ವಿಶೇಷ ತರಬೇತಿ.

b. ಶಾಲೆಗೆ ತೊರೆದು, 6 ತಿಂಗಳಾಗಿರುವ ಮಕ್ಕಳಿಗೆ 6 ತಿಂಗಳ ವಿಶೇಷ ತರಬೇತಿ.

c. ಶಾಲೆಗೆ ದಾಖಲಾಗದ ಹಾಗೂ ಶಾಲೆ ಬಿಟ್ಟು ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿ ಆಗಿರುವ ಮಕ್ಕಳಿಗೆ 12 ತಿಂಗಳ ವಿಶೇಷ ತರಬೇತಿ.

d. ಶಾಲೆಗೆ ದಾಖಲಾಗದ ಹಾಗೂ ಶಾಲೆ ಬಿಟ್ಟು 2 ವರ್ಷಕ್ಕಿಂತ ಹೆಚ್ಚಿನ ಅವಧಿ ಆಗಿರುವ ಮಕ್ಕಳಿಗೆ 2 ವರ್ಷ ವಿಶೇಷ ತರಬೇತಿ ವ್ಯವಸ್ಥೆ ಮಾಡಬೇಕಾದ ಅವಶ್ಯಕತೆ ಇದೆ.

e. ವಿಶೇಷ ತರಬೇತಿ ಕೇಂದ್ರಗಳನ್ನು ನಡೆಸಲು ನಿಯಮಾನುಸಾರ ಶಿಕ್ಷಣ ಸ್ವಯಂ ಸೇವಕರನ್ನು ನೇಮಕ ಮಾಡಬಹುದಾಗಿದೆ.

f. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿದ ನಂತರ ಯಾವುದೇ ವಿಳಂಬವಿಲ್ಲದೇ ವಿಶೇಷ ತರಬೇತಿಗೆ ಕಳುಹಿಸಬೇಕು. ಇದಕ್ಕಾಗಿ ಆಸಕ್ತಿ ಇರುವ ಹಾಗೂ ಕ್ರಿಯಾಶೀಲ ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳ ನೆರವನ್ನು ಪಡೆಯಬಹುದು.

g. 3 ತಿಂಗಳ ಅವಧಿಯ ವಿಶೇಷ ತರಬೇತಿ ಪಡೆಯುವುದಕ್ಕೆ ಅರ್ಹ ಮಕ್ಕಳಿದ್ದರೆ (ಈಗಾಗಲೇ 2010 ಬೇಸಿಗೆ ಅವಧಿಯಲ್ಲಿ ನಡೆಸಲಾಗುತ್ತಿರುವ ಚಿಣ್ಣರ ಅಂಗಳ ಕಾರ್ಯಕ್ರಮ ಹೊರೆತುಪಡಿಸಿ) ಕೇಂದ್ರಗಳು ಪ್ರಾರಂಭಿಸಲು ಸಿ.ಆರ್.ಪಿ. ಯವರು ಕೂಡಲೇ ಬ್ಲಾಕ್ ಹಂತಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮತಿ ಪಡೆಯುವುದು.

h. ಸೂಕ್ತ ಶಾಲೆ ಅಥವಾ ಲಭ್ಯವಿರುವ ಸುರಕ್ಷಿತ ಸ್ಥಳೀಯ ವಸತಿ ನಿಲಯವನ್ನು ಆಯ್ಕೆ ಮಾಡಿ ಶಾಲಾ ಮುಖ್ಯ ಶಿಕ್ಷಕರು ಹಾಗೂ ಕ್ಲಸ್ಟರ್/ಬ್ಲಾಕ್/ ಜಿಲ್ಲಾ ಹಂತದ ಅಧಿಕಾರಿಗಳು ಇವರು ಎಸ್.ಡಿ.ಎಂ.ಸಿ. ನೆರವಿನಿಂದ ವಿಶೇಷ ತರಬೇತಿ ವ್ಯವಸ್ಥೆ ಮಾಡಬೇಕು.

i. ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಮನ್ವಯಾಧಿಕಾರಿಗಳು 6 ತಿಂಗಳ ವಿಶೇಷ ತರಬೇತಿ ವಸತಿ ರಹಿತ ಕೇಂದ್ರಗಳನ್ನು ತೆರೆಯಲು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆದು ಕೇಂದ್ರಗಳು ಪ್ರಾರಂಭಿಸುವುದು.

j. ಜಿಲ್ಲಾ ಯೋಜನಾ ಸಮನ್ವಯಾಧಿಕಾರಗಳು 12 ತಿಂಗಳ ಅವಧಿಯ ವಸತಿ ಸಹಿತ ಹಾಗೂ ರಹಿತ ಕೇಂದ್ರಗಳನ್ನು ತೆರೆಯಲು ಡಿ.ಪಿ.ಸಿ. ಸಭೆಯಲ್ಲಿ ಅನುಮೋದನೆ ಪಡೆಯುವುದು.

k. 12 ತಿಂಗಳಿಗೂ ಮೇಲ್ಪಟ್ಟ ಅವಧಿಯ ಕೇಂದ್ರಗಳನ್ನು ತೆರೆಯಲು ರಾಜ್ಯ ಯೋಜನಾ ನಿರ್ದೇಶಕರ ಅನುಮತಿ ಪಡೆಯುವುದು.

✓ ವಿಶೇಷ ತರಬೇತಿಗಾಗಿ ಬಳಸಬಹುದಾದ ಸಾಹಿತ್ಯ:

a. ವಿಶೇಷ ತರಬೇತಿ ಕಾರ್ಯಕ್ರಮಕ್ಕೆ ಒಳಪಟ್ಟ ಮಕ್ಕಳಲ್ಲಿ ಕನಿಷ್ಠ ಕಲಿಕಾ ಸಾಮರ್ಥ್ಯಗಳನ್ನು ಬಳಸಲು ಚಿಣ್ಣರ ಅಂಗಳ ಹಾಗೂ ಹಿರಿಯರ ಚಿಣ್ಣರ ಅಂಗಳ ಸಾಹಿತ್ಯವನ್ನು ಬಳಸಬಹುದಾಗಿದ್ದು, ಸಾಹಿತ್ಯದ ಪ್ರತಿಗಳು ಅಗತ್ಯವಿದ್ದಲ್ಲಿ ರಾಜ್ಯ ಕಛೇರಿಗೆ ಬೇಡಿಕೆ ಸಲ್ಲಿಸುವುದು.

b. ಮಕ್ಕಳ ವಯಸ್ಸಿಗೆ ಅನುಗುಣವಾಗಿ ಹಾಗೂ ಪೂರ್ವ ಪರೀಕ್ಷೆ ಮೂಲಕ ಕಲಿಕಾ ಸಾಮರ್ಥ್ಯಗಳನ್ನು ಗಮನಿಸಿ ವೈಯಕ್ತಿಕ ಶೈಕ್ಷಣಿಕ ಯೋಜನೆ ತಯಾರಿಸಿ ಮಕ್ಕಳಿಗೆ ಸೂಕ್ತ ಕಲಿಕಾ ಚಟುವಟಿಕೆಗಳನ್ನು (ಪಠ್ಯ ಪುಸ್ತಕ ಹಾಗೂ ಪಠ್ಯೇತರ) ಹಮ್ಮಿಕೊಳ್ಳುವುದು.

✓ ಈ ಕಛೇರಿಯ ಸುತ್ತೋಲೆ ದಿನಾಂಕ: 11.05.2010 ರಲ್ಲಿ ಪ್ರತಿ ಸೇತುಬಂಧ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಪಿ.ಎ.ಬಿ 2010ರ ಸಭೆಯಲ್ಲಿ ಅನುಮೋದನೆಯಾಗಿರುವಂತೆ ಘಟಕ ವೆಚ್ಚದ ವಿವರಗಳು ನಮೂದಿಸಿದ್ದು, ಅದರನ್ವಯ ಮೂರು, ಆರು ಮತ್ತು ಹನ್ನೆರಡು ತಿಂಗಳ ಕಾರ್ಯಕ್ರಮಗಳಿಗೆ ಕ್ರಮ ಕೈಗೊಳ್ಳುವುದು. ಮಕ್ಕಳ ಅವಶ್ಯಕತೆಗೆ ಅನುಸಾರವಾಗಿ ವೈಯಕ್ತಿಕ ಅಥವಾ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಅಗತ್ಯತೆ ಕಂಡುಬಂದಲ್ಲಿ, ಕಾರ್ಯಕ್ರಮದ ಸ್ವರೂಪದ ಬಗ್ಗೆ ವಿವರಗಳನ್ನೊಳಗೊಂಡ ಪ್ರಸ್ತಾವನೆಯನ್ನು ಸಲ್ಲಿಸಿ ಸರ್ವ ಶಿಕ್ಷಣ ಅಭಿಯಾನದ ರಾಜ್ಯ ಕಾರ್ಯಕಾರಿ ಸಮಿತಿಯ ಅನುಮೋದನೆಯನ್ನು ಪಡೆಯಬೇಕಾಗಿರುತ್ತದೆ.

✓ ಆರ್.ಟಿ.ಇ-2009 ರನ್ವಯ ಶಾಲಾ ವಯಸ್ಸಿನ ಎಲ್ಲಾ ಮಕ್ಕಳಿಗೂ ಕಡ್ಡಾಯವಾಗಿ ಶಿಕ್ಷಣ ಒದಗಿಸಲು ಕ್ರಮ ಕೈಗೊಳ್ಳಬೇಕಾಗಿದ್ದು, ಈ ಹಿನ್ನೆಲೆಯಲ್ಲಿ ವಿಶೇಷ ಅಗತ್ಯತೆಯುಳ್ಳ ಶಾಲಾ ವಯಸ್ಸಿನ ಮಕ್ಕಳನ್ನು ಗುರುತಿಸಿ ಹತ್ತಿರದ ಶಾಲೆಗಳಲ್ಲಿ ಸೇರಿಸಿ ಅವರಿಗೆ ಸರ್ವ ಶಿಕ್ಷಣ ಅಭಿಯಾನದ ವತಿಯಿಂದ ನಡೆಸಲಾಗುತ್ತಿರುವ ಗೃಹಾಧಾರಿತ ಕಾರ್ಯತಂತ್ರದಡಿಯಲ್ಲಿ ತಪ್ಪದೇ ಸೂಕ್ತ ತರಬೇತಿ ನೀಡುವುದು. ತೀವ್ರ ಅಂಗವಿಕಲರಿದ್ದಲ್ಲಿ ಬೋಧಿಸಲು ವಿಶೇಷ ತರಬೇತಿ ಹೊಂದಿರುವ ಶಿಕ್ಷಕರನ್ನು ನೇಮಿಸಬೇಕು.

✓ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಮುಸ್ಲಿಂ ಸಮುದಾಯದ ಪ್ರಾಥಮಿಕ ಶಾಲಾ ವಯಸ್ಸಿನ ಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ಶಾಲೆಯಿಂದ ಹೊರಗುಳಿದಿರುವುದು 11ನೇ ಜೆ.ಆರ್.ಎಂ. ವರದಿಯಲ್ಲಿ ಕಂಡುಬಂದಿದ್ದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಾರಣಗಳು ವಿಶ್ಲೇಷಿಸುವ ಅಗತ್ಯವಿರುತ್ತದೆ. ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಯ ಆಧಾರದ ಮೇಲೆ ಸದರಿ ಮಕ್ಕಳಿಗೆ ಸೂಕ್ತ ಯೋಜನೆಗಳ ಮೂಲಕ ಶಾಲೆಗಳಿಗೆ ಹಾಜರಾಗುವಂತೆ ವ್ಯವಸ್ಥೆ ಮಾಡಬೇಕು.

## 2. ವಲಸೆ ಕುಟುಂಬಗಳ ಮಕ್ಕಳ ಶಿಕ್ಷಣ ಸಂಬಂಧ :

ಈಗಾಗಲೇ ಜನವರಿ–2010ರ ಸಮಗ್ರ ಮಕ್ಕಳ ಗಣತಿಯಲ್ಲಿ ವಲಸೆ ಹೋಗುವ/ಬರುವ ಕುಟುಂಬಗಳು ಎಂದು ಗುರುತಿಸಲಾಗಿರುವ ಕುಟುಂಬಗಳ ಬಗ್ಗೆ ಮಾಹಿತಿ ಲಭ್ಯವಿದ್ದು, ಇದನ್ನು ವಿಶ್ಲೇಷಿಸಿ Mapping ಮೂಲಕ ವಲಸಿತರ ಮೂಲ ವಾಸಸ್ಥಳ, ಗ್ರಾಮ, ತಾಲ್ಲೂಕು, ಜಿಲ್ಲೆ ಹಾಗೂ ವಲಸೆ ಹೋದ ಪ್ರದೇಶಗಳ ವಿಳಾಸ, ವರ್ಷದ ಯಾವ ಅವಧಿಯಲ್ಲಿ ಯಾವ ಪ್ರದೇಶಕ್ಕೆ ವಲಸೆ ಹೋಗುವರು, ಯಾವ ವೃತ್ತಿಯನ್ನು ಕೈಗೊಳ್ಳಲು ವಲಸೆ ಹೋಗುವರು ಹಾಗೂ ಯಾವಾಗ ವಾಪಸ್ ಬರುವರು ಎಂಬುದರ ಬಗ್ಗೆ ವಿವರಗಳನ್ನು ಈ ಕೆಳಗೆ ನಮೂದಿಸಿರುವ ನಮೂನೆಯಲ್ಲಿ ಕ್ರೋಡೀಕರಿಸುವುದು.

| ಕ್ರಸಂ | ಜಿಲ್ಲೆ | ವಲಸೆ ಹೋಗುವವರ ಮಾಹಿತಿ | | | | | ವಲಸೆ ಬರುವವರ ಮಾಹಿತಿ | | | | | ಷರಾ |
|---|---|---|---|---|---|---|---|---|---|---|---|---|
| | | ತಾಲ್ಲೂಕು / ಗ್ರಾಮ | ಯಾವ ತಾಲ್ಲೂಕಿಗೆ/ಜಿಲ್ಲೆಗೆ ಹೋಗುವರು | ಎಷ್ಟು ಕುಟುಂಬಗಳು ವಲಸೆ ಹೋಗುವರು | ಯಾವ ವೃತ್ತಿಗಾಗಿ ಹೋಗುವರು | ವರ್ಷದ ಯಾವ ಅವಧಿಯಲ್ಲಿ ಹೋಗುವರು | ತಾಲ್ಲೂಕು / ಗ್ರಾಮ | ಯಾವ ತಾಲ್ಲೂಕಿನಿಂದ/ಜಿಲ್ಲೆಯಿಂದ ಬರುತ್ತಾರೆ | ಎಷ್ಟು ಕುಟುಂಬಗಳು ವಲಸೆ ಬರುವರು | ಯಾವ ವೃತ್ತಿಗಾಗಿ ಬರುವರು | ವರ್ಷದ ಯಾವ ಅವಧಿಯಲ್ಲಿ ಬರುವರು | |
| 1 | 2 | | 3 | 4 | 5 | 6 | | 7 | 8 | 9 | 10 | 11 |

ಸಂಬಂಧಿಸಿದ ಮಕ್ಕಳ ಶಿಕ್ಷಣಕ್ಕೆ ಮೂಲ ಸ್ಥಳದಲ್ಲಿ ಹಾಗೂ ವಲಸೆ ಬಂದ ಸ್ಥಳಗಳಲ್ಲಿ ಅಗತ್ಯಕ್ರಮ ಕೈಗೊಳ್ಳಬೇಕು. ಇದಕ್ಕಾಗಿ ಅಂತರ್ ಜಿಲ್ಲೆ ಹಾಗೂ ಅಂತರ್ ರಾಜ್ಯ ಸಂಪರ್ಕವನ್ನು ಎರಡೂ ಬದಿಯಲ್ಲಿಯೂ ಇಟ್ಟುಕೊಂಡು, ಆಗಿಂದಾಗ್ಗೆ ಸಭೆಗಳನ್ನು ನಡೆಸಿ ವಿಚಾರ ವಿನಿಮಯ ಮಾಡುವುದು. ಅಂತಹ ಮಕ್ಕಳಿಗೆ ವಲಸೆ ಕಾರ್ಡ್‌ಗಳನ್ನು ನೀಡುವ ವ್ಯವಸ್ಥೆ ಮಾಡಬೇಕು. ಅನ್ಯ ಭಾಷಾ ಪಠ್ಯ ಪುಸ್ತಕಗಳ/ಕೈಪಿಡಿಗಳ ಅಗತ್ಯವಿದ್ದಲ್ಲಿ ಸಮನ್ವಯದ ಮೂಲಕ ಸಂಬಂಧಿಸಿದವರಿಂದ ಪಡೆಯಲು ಪ್ರಯತ್ನಿಸಬೇಕು. ಈ ಕ್ರಮವನ್ನು ಸುವ್ಯವಸ್ಥಿತವಾಗಿ ವಹಿಸಲು ಜಿಲ್ಲಾ ಉಪನಿರ್ದೇಶಕರು(ಆಡಳಿತ) ಇವರ ಅಧ್ಯಕ್ಷತೆಯಲ್ಲಿ ಡಿ.ವೈ.ಪಿ.ಸಿ(ಸದಸ್ಯ ಕಾರ್ಯದರ್ಶಿಗಳು) ಹಾಗೂ ಬಿ.ಇ.ಓ ಮತ್ತು ಬಿ.ಆರ್.ಸಿ ರವರು ಸದಸ್ಯರಾಗಿ ಸಮಿತಿಯನ್ನು ರಚಿಸಬಹುದು. ಟೆಂಟ್ ಶಾಲೆಗಳು ಹಾಗೂ ಋತುಮಾನ ಶಾಲೆಗಳನ್ನು ತೆರೆಯಲು ನಿಯಮಾನುಸಾರ ಕ್ರಮ ವಹಿಸಬೇಕು.

ವಲಸೆ ಪ್ರದೇಶಗಳ ಮತ್ತು ಸಂಬಂಧಿಸಿದ ಕುಟುಂಬಗಳ ಹಾಗೂ ಮಕ್ಕಳ ಮಾಹಿತಿಯನ್ನು ಅಂತರ್‌ಜಾಲದಲ್ಲಿ (Website) ಅಳವಡಿಸಬೇಕು ಹಾಗೂ ಆಗಿಂದಾಗ್ಗೆ Update ಮಾಡಬೇಕು. ಅಗತ್ಯವಿದ್ದಲ್ಲಿ ಮಗುವಿನ ಶಿಕ್ಷಣದ ಬಗ್ಗೆ ಪೋಷಕರಿಗೆ, ಕೌನ್ಸಿಲಿಂಗ್ ನಡೆಸಿ, ಕೌನ್ಸಿಲಿಂಗ್ ಸಮಯದಲ್ಲಿ ಪೋಷಕರಿಗೆ ಇಲಾಖೆಯ ಪ್ರೋತ್ಸಾಹದಾಯಕ ಕಾರ್ಯಕ್ರಮಗಳ ಬಗ್ಗೆ ತಿಳಿಸಬೇಕು. ಪೋಷಕರಲ್ಲಿ ತಮ್ಮ ಮಕ್ಕಳಿಗೆ ಶಿಕ್ಷಣ ಒದಗಿಸುವ ಮಹತ್ವದ ಬಗ್ಗೆ ಹಾಗೂ ಈ ಕುರಿತು ತಂದೆ ತಾಯಿಗಳ ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸಲು ಪ್ರಯತ್ನಿಸಬೇಕು.

3. ಶಿಕ್ಷಣದಿಂದ ವಂಚಿತ ನಗರ ಪ್ರದೇಶದ ಮಕ್ಕಳ ಶಿಕ್ಷಣ ಕುರಿತು.

ಬೆಂಗಳೂರು ನಗರದಲ್ಲಿ (Million plus city) ಅನಾಥ ಹಾಗೂ ನಿರ್ಗತಿಕ/ನಿರಾಶ್ರಿತ ಮಕ್ಕಳಿಗೆ ಆಶ್ರಯ ಕೇಂದ್ರಗಳನ್ನು (Shelter homes) ತೆರೆಯಲು ಎ.ಡಬ್ಲ್ಯೂ.ಪಿ. 2010-11 ರಲ್ಲಿ ಅನುನೋದನೆಯಾಗಿರುವಂತೆ ಕ್ರಮ ವಹಿಸುವುದು. ನಗರ ಪ್ರದೇಶದಲ್ಲಿ ಉಪ-ವಾರ್ಡ್ ಮಟ್ಟದಲ್ಲಿ (Smaller units) ಯೋಜನೆ ತಯಾರಿಸಿ, ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡ ಸಮಿತಿ ರಚಿಸಿ ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ತೀವ್ರ ಗಮನ ನೀಡಬೇಕು. ಶಾಲಾ ಮುಖ್ಯ ಶಿಕ್ಷಕರು WER(Ward Educational Register) ನಿರ್ವಹಿಸಬೇಕು.

ನಗರ ಪ್ರದೇಶಗಳ ಶಿಕ್ಷಣದಿಂದ ವಂಚಿತವಾಗಿರುವ ಮಕ್ಕಳಿಗೆ 2010-11ನೇ ಸಾಲಿನಲ್ಲಿ ಹಮ್ಮಿಕೊಂಡಿರುವ ಆವಿಷ್ಕೃತ ಚಟುವಟಿಕೆಗಳ ಬಗ್ಗೆ ಈಗಾಗಲೇ ನೀಡಲಾಗಿರುವ ಈ ಕಛೇರಿಯ ಸುತ್ತೋಲೆ ದಿನಾಂಕ: 11.05.2010 ರಲ್ಲಿ ನಮೂದಿಸಿರುವಂತೆ ಕಾರ್ಯಕ್ರಮಗಳು ನಡೆಸಲು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಸಲ್ಲಿಸುವುದು.

4. ಶಾಲಾ, ಕ್ಲಸ್ಟರ್, ಬ್ಲಾಕ್ ಹಾಗೂ ಜಿಲ್ಲಾ ಹಂತಗಳಲ್ಲಿ ಆಗುತ್ತಿರುವ ಪ್ರಗತಿ ಪರಿಶೀಲನೆ ಕುರಿತು.

a. ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಜಿಲ್ಲಾ ಯೋಜನೆ ಉಪಸಮನ್ವಯಾಧಿಕಾರಿಗಳು, ಸ.ಶಿ.ಅ, ಬ್ಲಾಕ್ ಹಾಗೂ ಕ್ಲಸ್ಟರ್ ಹಂತದ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಕ್ಷೇತ್ರ ಹಾಗೂ ಬ್ಲಾಕ್‌ಗಳಲ್ಲಿ ನಡೆಸಲಾಗುತ್ತಿರುವ ಪ್ರತಿಯೊಂದು ಸೇತುಬಂಧ ಕೇಂದ್ರಕ್ಕೆ ಕಾಲಕಾಲಕ್ಕೆ ಸ್ಥಳ ಭೇಟಿ ನಡೆಸಿ ಉಸ್ತುವಾರಿ ವಹಿಸಬೇಕು. ಕೇಂದ್ರದ ಮಕ್ಕಳ ದಾಖಲಾತಿ, ಹಾಜರಾತಿ, ಕಲಿಕೆ ವೈಯಕ್ತಿಕ ಶೈಕ್ಷಣಿಕ ಯೋಜನೆ, ಶೈಕ್ಷಣಿಕ ಪ್ರಗತಿ ಹಾಗೂ ಸಂಬಂಧಿಸಿದ ಇತರೆ ಅಂಶಗಳ ಬಗ್ಗೆ ಪರಿಶೀಲಿಸಿ ಸಂಬಂಧಿಸಿದ ಮುಖ್ಯ ಶಿಕ್ಷಕರಿಗೆ, ಶಿಕ್ಷಕರಿಗೆ ಹಾಗೂ ಸ್ವಯಂ ಸೇವಕರಿಗೆ ಅಗತ್ಯ ಮಾರ್ಗದರ್ಶನ ನೀಡುವುದು.

b. ಪ್ರತಿ ತಿಂಗಳ 5ನೇ ತಾರೀಖಿನ ಒಳಗೆ ಶಾಲಾ ಮುಖ್ಯ ಶಿಕ್ಷಕರು ಸಿ.ಆರ್.ಪಿ.ಯವರಿಗೆ ನಿಗದಿತ ನಮೂನೆಯಲ್ಲಿ ದೃಢೀಕರಣದೊಂದಿಗೆ ಪ್ರಗತಿ ವರದಿ ಸಲ್ಲಿಸಬೇಕು.

c. ಸಿ.ಆರ್.ಪಿ.ಯವರು ಪ್ರತಿ ತಿಂಗಳು ಜಿಲ್ಲಾ ಹಂತಕ್ಕೆ ಮಾಹಿತಿ ಒದಗಿಸಬೇಕು.

d. ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಕ್ರೋಢೀಕೃತ ವರದಿಯನ್ನು ಪ್ರತಿ ತಿಂಗಳೂ ರಾಜ್ಯ ಕಛೇರಿಗೆ ಸಲ್ಲಿಸಬೇಕು. ಒಓಎಸ್‌ಸಿ ಮಕ್ಕಳ ವಿಶೇಷ ತರಬೇತಿಯ ಪ್ರಗತಿಯನ್ನು ಈ ಪರಿಷ್ಕೃತ ನಮೂನೆಗಳಲ್ಲಿ ನಮೂದಿಸಿ ಈ ಕಛೇರಿಗೆ ವರದಿ ಸಲ್ಲಿಸುವುದು.

e. ವಿಶೇಷ ತರಬೇತಿ ಹಾಗೂ ಇತರೆ ಸೇತುಬಂಧ ಕಾರ್ಯತಂತ್ರಗಳ ಮೂಲಕ ಮಕ್ಕಳು ಸಾಧಿಸುತ್ತಿರುವ ಪ್ರಗತಿಯನ್ನು ಆಗಾಗ್ಗೆ ಗಮನಿಸಿ, ಮಕ್ಕಳನ್ನು ಸಕಾಲದಲ್ಲಿ ಮುಖ್ಯವಾಹಿನಿಗೆ ತರಲು ಕ್ರಮ ಮಾಡಬೇಕು. ಮುಖ್ಯವಾಹಿನಿಗೆ ಬಂದ ಮಕ್ಕಳು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪೂರೈಸುವ ಬಗ್ಗೆ ಸೂಕ್ತ ಟ್ರ್ಯಾಕಿಂಗ್ ಆಗಬೇಕು.

.....6/-

ಒಟ್ಟಾರೆ, ಆರ್.ಟಿ.ಇ-2009ರ ಕಾಯ್ದೆಯಲ್ಲಿ ಹೇಳಲಾಗಿರುವ ಅಂಶಗಳನ್ನು ಯಥಾವತ್ತಾಗಿ ಅನುಷ್ಠಾನಕ್ಕೆ ತರಲು ಕ್ರಮ ವಹಿಸಬೇಕು. 6 ರಿಂದ 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳು ಶಿಕ್ಷಣ ಪಡೆಯುವಂತೆ ಕ್ರಮ ವಹಿಸಬೇಕು. ಈ ಬಗ್ಗೆ ಕ್ರಿಯಾ ಯೋಜನೆ ಸಿದ್ಧಪಡಿಸಿಕೊಂಡು ರಾಜ್ಯ ಕಛೇರಿಯಿಂದ ಅಗತ್ಯ ಮಾರ್ಗದರ್ಶನ ಪಡೆದು ಮುನ್ನಡೆಯುವುದು ಜಿಲ್ಲಾ ಮಟ್ಟದ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ,
ಬೆಂಗಳೂರು.

ಗೆ,

1) ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ ರವರಿಗೆ
2) ರಾಜ್ಯದ ಎಲ್ಲಾ ಜಿಲ್ಲಾ ಯೋಜನಾ ಉಪ ಸಮನ್ವಯಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ ರವರಿಗೆ

ಪ್ರತಿಯನ್ನು,

1) ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ & ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು.
2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ಗುಲ್ಬರ್ಗಾ
4) ರಾಜ್ಯ ಯೋಜನಾ ನಿರ್ದೇಶಕರ ಆಪ್ತ ಶಾಖೆ, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.